**ಅಲ್ಯೂಮಿನಿಯಂ ಉತ್ಪಾದನೆಯಲ್ಲಿ ಹೆಚ್ಚಳ**

ನವದೆಹಲಿ, ಅಕ್ಟೋಬರ್ 25, 2005

ದೇಶದಲ್ಲಿ ಏಪ್ರಿಲ್– ಸೆಪ್ಟೆಂಬರ್2005 ಅವಧಿಯಲ್ಲಿನ ಅಲ್ಯೂಮಿನಿಯಂನ ಒಟ್ಟು ಉತ್ಪಾದನೆ ಅಂದಾಜು ಪ್ರಮಾಣವು 455657 ಟನ್‌ಗಳಾಗಿದ್ದು, ಕಳೆದ ವರ್ಷದ ಇದೇ ಅವಧಿಯಲ್ಲಿ ಈ ಪ್ರಮಾಣವು 420113 ಟನ್‌ಗಳಾಗಿತ್ತು. ಈ ಒಟ್ಟು ಉತ್ಪಾದನೆಯಲ್ಲಿ ಸಾರ್ವಜನಿಕ ಸ್ವಾಮ್ಯದ ರಾಷ್ಟ್ರೀಯ ಅಲ್ಯೂಮೀನಿಯಂ ಕಂಪನಿ ಲಿಮಿಟೆಡ್ (ನೆಲ್ಕೋ) 177720 ಟನ್‌ಗಳಷ್ಟು ಹಾಗೂ ಭಾರತ್ ಅಲ್ಯೂಮೀನಿಯಂ ಕಂಪನಿ ಲಿಮಿಟೆಡ್ (ಬಾಲ್ಕೋ) 51547ಟನ್‌ಗಳಷ್ಟು ಉತ್ಪಾದಿಸಿದೆ. ಖಾಸಗಿ ವಲಯದಲ್ಲಿ ಹಿಂಡಾಲ್ಕೋ ಕೈಗಾರಿಕಾ ಲಿಮಿಟೆಡ್ 207668 ಟನ್‌ಗಳಷ್ಟು ಹಾಗೂ ಮದ್ರಾಸ್ ಅಲ್ಯೂಮೀನಿಯಂ ಕಂಪನಿ ಲಿಮಿಟೆಡ್ (ಮಾಲ್ಕೋ) 18772 ಟನ್‌ಗಳಷ್ಟು ಉತ್ಪಾದಿಸಿದೆ. ಈ ಉತ್ಪಾದನೆ ಪ್ರಮಾಣವು ನಿಗದಿಪಡಿಸಲಾದ ಗುರಿ 450780 ಟನ್‌ಗಳನ್ನು ದಾಟಿದೆ.

ಸೆಪ್ಟೆಂಬರ್ 2005ರಲ್ಲಿ ದೇಶದಲ್ಲಿನ ಒಟ್ಟು ಅಲ್ಯೂಮೀನಿಯಂ ಉತ್ಪಾದನೆ ಪ್ರಮಾಣವು 76929 ಟನ್‌ಗಳಾಗಿದ್ದು, ನಿಗದಿತ ಗುರಿ 75105 ಟನ್‌ಗಳಾಗಿತ್ತು. ಈ ಉತ್ಪಾದನೆಯಲ್ಲಿ ನೆಲ್ಕೋದ ಉತ್ಪಾದನೆ 29963 ಟನ್‌ಗಳಾದರೆ, ಬಾಲ್ಕೋ 8938ಟನ್, ಹಿಂಡಾಲ್ಕೋ 34922 ಟನ್ ಹಾಗೂ ಮಾಲ್ಕೋ 3106 ಟನ್‌ಗಳಾಗಿದೆ.

******

ಅದ:ಪಚ:ಪಿಜಿಪಿ:ಟಿ.ಎಂ.ಎಸ್: ಬೆಂ:15:50 25-10-2005